ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು

ದಿನಾಂಕಃ 28-03-2026

**ಸಿ.ಸಿ.ನಂ.67/2021**

ಫಿರ್ಯಾದುದಾರರು: ಶ್ರೀಮತಿ ಉಷಾ
ಕೋಂ ನರೇಂದ್ರ ಕುಮಾರ್ ಎಂ.ಬಿ.
ವಯಸ್ಸು ಸುಮಾರು 39 ವರ್ಷ,
ವಾಸಃ ನೆಹರು ನಗರ, ಬಿ.ಎಸ್.ಎನ್.ಎಲ್.,
ಟವರ್ ರಸ್ತೆ, ವಿಜಯಪುರ ಬಡಾವಣೆ,
ಚಿಕ್ಕಮಗಳೂರು.

ವಿರುದ್ಧ

ಆರೋಪಿ : ಹರೀಶ್ ಕುಮಾರ್ ಎಲ್.ಬಿ.
ಬಿನ್ ಬಸಪ್ಪ,
ವಯಸ್ಸು ಸುಮಾರು 40 ವರ್ಷ,
ವಾಸಃ 438, ಶ್ರೇಯಸ್ ನಿಲಯ,
ಟಿ.ಕೆ. ಲೇಔಟ್, ಮೈಸೂರು.

**: ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿ ಹೇಳಿಕೆಃ**

1. ಅಭಿಯೋಜನೆಯವರ ಪರ ಸಾಕ್ಷಿ ವಿಚಾರಣೆಯನ್ನು ಕೇಳಿರುವಿಯಾ?

ಉತ್ತರ :

2. ಫ್ರಾಸಾ-2 – ಶ್ರೀಮತಿ ಉಷಾ ಕೋಂ ನರೇಂದ್ರ ಕುಮಾರ್ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಆರೋಪಿಯಾದ ತನ್ನ ಗಂಡನಿಂದ ರೂ.20,00,000/-ಗಳನ್ನು ಸಾಲವಾಗಿ ಪಡೆದುಕೊಂಡು ಸದರಿ ಮೊತ್ತದ ಪಾವತಿಗಾಗಿ ದಿನಾಂಕ 29.08.2018 ರ ಸಿಂಡಿಕೇಟ್ ಬ್ಯಾಂಕ್, ಕೆ.ಆರ್.ಸರ್ಕಲ್, ಮೈಸೂರು ಚೆಕ್ ನಂ.471111 ನ್ನು ರೂಃ 10,00,000-00 ಗಳಿಗೆ ನೀಡಿದ್ದೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

3. ಫ್ರಾಸಾ-2 ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಹೇಳಿರುವುದೇನೆಂದರೆ ತಾನು ಸದರಿ ಚೆಕ್ಕನ್ನು ಐ.ಡಿ.ಬಿ.ಐ. ಬ್ಯಾಂಕ್ ಲಿಮಿಟೆಡ್, ಚಿಕ್ಕಮಗಳೂರು ಶಾಖೆಗೆ ನಗದೀಕರಣಕ್ಕೆಂದು ಸಲ್ಲಿಸಿದಾಗ, ಸದರಿ ಚೆಕ್ **"Funds Insufficient"** ಎಂಬ ಹಿಂಬರಹದೊಂದಿಗೆ ನಗದಾಗದೇ ವಾಪಾಸ್ಸು ಬಂದಿರುವುದೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

4. ಫಿರ್ಯಾದಿ-2 ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಸದರಿ ಚೆಕ್ ನಗದು ಆಗದೇ ಇದ್ದಾಗ, ದಿನಾಂಕಃ 19.09.2018 ರಂದು ನೋಟಿಸ್ ನೀಡಿದ್ದು, ನೀವು ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಹಾಗೂ ತನ್ನ ಪರವಾಗಿ ನಿಪಿ-1 ರಿಂದ 6 ದಾಖಲೆಗಳನ್ನು ನಿಶಾನೆಯನ್ನಾಗಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

5. ನೀವು ಈ ಮೊಕದ್ದಮೆಯಲ್ಲಿ ಏನನ್ನಾದರು ಹೇಳುವುದಿದೆಯೇ?

ಉತ್ತರಃ

6. ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲೆ ಹಾಜರುಪಡಿಸುತ್ತೀರಾ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

Sd/-
**[ಕುಮಾರಿ ಸುಜಾತ]**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮು.ನ್ಯಾದಂ., ಚಿಕ್ಕಮಗಳೂರು.